**<u>ದಿನಾಂಕಃ 16-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>**

***<u>ಮುಂದುವರೆದ ಪಾಟೀ ಸವಾಲುಃ ಶ್ರೀ ಬಿ.ಜಿ.ಕೆ. ವಕೀಲರಿಂದ 3 ಮತ್ತು 4 ನೇ ಪ್ರತಿವಾದಿಯರ ಪರವಾಗಿಃ-</u>***

ಈ ದಾವೆಯಲ್ಲಿ ಅನಂತರಾಮನ ಕುಟುಂಬದ ವಂಶವೃಕ್ಷ ಸಲ್ಲಿಸಿಲ್ಲ. ದಾವಾ ಆಸ್ತಿಗಳು ಲಕ್ಷ್ಮಣ ಸಿಂಗ್ ಎಂಬುವವರಿಗೆ ಸೇರಿದ್ದವು ಎಂಬ ಬಗ್ಗೆ ದಾಖಲೆ ಸಲ್ಲಿಸಿಲ್ಲ, ಸದರಿ ದಾಖಲೆಗಳು ನಮ್ಮ ಬಳಿ ಇಲ್ಲ. ಲಕ್ಷ್ಮಣ ಸಿಂಗ್ ಏನು ಕೆಲಸ ಮಾಡುತ್ತಿದ್ದರು ನನಗೆ ಗೊತ್ತಿಲ್ಲ, ಆ ಬಗ್ಗೆ ದಾಖಲೆ ಇಲ್ಲ, ಅವರ ಆದಾಯದ ಮೂಲ ಗೊತ್ತೆ ಎಂದರೆ ನಿಜಾಮರ ಸರ್ಕಾರದಲ್ಲಿ ಕೆಲಸ ಮಾಡುತ್ತಿದ್ದರು, ಅವರ ಆದಾಯ ಗೊತ್ತಿಲ್ಲ.

ದಾವಾ ಆಸ್ತಿಗಳಲ್ಲಿ ಅಂಗಡಿ ಮಳಿಗೆಗಳು ಮತ್ತು ಮನೆಗಳನ್ನು ಕಟ್ಟಿ ಎಷ್ಟು ವರ್ಷ ಆಯಿತು ಎಂದರೆ ಸಾಕ್ಷಿಯು 18-19 ವರ್ಷಗಳು ಎನ್ನುತ್ತಾರೆ. ನನ್ನ ವಾದ ಪತ್ರದ 8 ನೇ ಖಂಡಿಕೆಯಲ್ಲಿ 3 ರಿಂದ 6 ನೇ ಸಾಲಿನಲ್ಲಿ ಹೇಳಿರುವಂತೆ ಮೂಲ ವಾದಿಯು ಯಾವ ಖಾತೆ ದಾಖಲೆಗಳ ಬಗ್ಗೆ ಪ್ರಯತ್ನಿಸಿದ್ದರು ಎಂದರೆ ಸಾಕ್ಷಿಯು ನನ್ನ ತಾಯಿ-ಮೂಲ ವಾದಿ ಮತ್ತು ಆಕೆಯ ತಮ್ಮನ ಹೆಸರಿನಲ್ಲಿ ದಾವಾ ಆಸ್ತಿಗಳನ್ನು ಖಾತೆ ಮಾಡಿಸಲು ಪ್ರಯತ್ನಿಸಲಾಗಿತ್ತು. ಆ ಸಂದರ್ಭದಲ್ಲಿ ದಾವಾ ಆಸ್ತಿಗಳ ಖಾತೆ ನನ್ನ ತಾಯಿಯ ತಂದೆ ಅನಂತರಾಮ್ ಹೆಸರಿನಲ್ಲಿ ಇದ್ದವು. ಸದರಿ ದಾಖಲೆಗಳನ್ನು ನಾನು ನೋಡಿದ್ದೇನೆ. ಮೇಲ್ಕಂಡಂತೆ ಖಾತೆ ಮಾಡಿಸಲು ಪ್ರಯತ್ನ ಮಾಡಿದ್ದಾಗ ದಾವಾ ಸ್ವತ್ತುಗಳಲ್ಲಿ ನಿರ್ಮಾಣ ಇತ್ತು. ದಾವಾ ಆಸ್ತಿಗಳು ಮೂಲ ವಾದಿ ಮತ್ತು ಅವಳ ತಂದೆ ಕುಟುಂಬಕ್ಕೆ ಸಂಬಂಧ ಇಲ್ಲ

ಎಂದರೆ ಸುಳ್ಳು. ನನ್ನ ತಾಯಿ ಅವರ ತಂದೆಯ ಮೂರನೇಯ ಹೆಂಡತಿಯ ಮಗಳು. ಸುಳ್ಳು ಸಾಕ್ಷ್ಯಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನೆ ಮೇರೆಗೆ ಬೆರಳಚ್ಚುಗಾರ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿ ಮತ್ತು ಅವರ ಪರ ವಕೀಲರು ನೋಡಿ ತಿಳಿದುಕೊಂಡಿರುತ್ತಾರೆ.)

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ರಾಯಚೂರು.**